ಮೂಲ ದಾವಾ ನಂಃ 12/2020

ಪಿ.ಡಬ್ಲ್ಯೂಃ 03

( ಇಂದು ದಿನಾಂಕಃ 22.08.2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಾದ ಶ್ರೀ ಆರ್. ಎಸ್. ಎಚ್. ಜಿ. ರವರಿಂದ**

ನಾನು ತೊರ್ಲೆಬಾಗ್ ಎಂಬಲ್ಲಿ ನನ್ನ ಗಂಡನೊಂದಿಗೆ ವಾಸವಿರುತ್ತೇನೆ. ದಾವಾ ಆಸ್ತಿ ಹೊಸಾಳೆ ಮತ್ತು ಬಿಡ್ತುಲ್ ಬಾಗ್ ಎಂಬಲ್ಲಿ ಇದೆ. ತೊರ್ಲೆಬಾಗ್ ದಾವಾ ಆಸ್ತಿಯಿಂದ 2-3 ಕಿ ಮೀ ಅಂತರದಲ್ಲಿ ಇದೆ. 1, 2 ಮತ್ತು 4 ನೇ ವಾದಿಯರು ತೊರ್ಲೆಬಾಗದಲ್ಲಿ ಇದ್ದಾರೆ. 4 ನೇ ವಾದಿ ಛಾಯಾ, 3 ನೇ ವಾದಿ ತುಳಸಿ, ಲಲಿತಾ ರವರು ತೀರಿಕೊಂಡಿರುತ್ತಾರೆ. 1, 2 ಮತ್ತು 5 ನೇ ವಾದಿ ಜೀವಂತ ಇರುತ್ತಾರೆ. ಉಳಿದ ವಾದಿಯರೆಲ್ಲಾ ತೀರಿಕೊಂಡಿರುತ್ತಾರೆ. 3 ನೇ ವಾದಿ ಮುಡಗೇರಿಯಲ್ಲಿ ವಾಸವಾಗಿರುತ್ತಾರೆ. 5 ನೇ ವಾದಿ ಹಳಗಾದಲ್ಲಿ ವಾಸವಿರುತ್ತಾರೆ. ಪುಂಡಲೀಕ ರವರ ಜೊತೆ ಅವರ ಹೆಂಡತಿ ಮತ್ತು ಮಕ್ಕಳು ವಾಸವಿರುತ್ತಾರೆ. ಕೋಯರ್ ನಿಗೆ ಸುಬ್ಬಾ ಎಂಬ ಸಹೋದರ ಇದ್ದಾರೆ ಎಂದರೆ ಸುಳ್ಳು. ಕೋಯರ್ ನಿಗೆ ಉಬ್ಜಾ ಅಲಿಯಾಸ್ ಲಲಿತಾ ಎಂಬ ಮಗಳು ಇದ್ದಿರಲಿಲ್ಲ ಎಂದರೆ ಸರಿಯಲ್ಲ. ಪುಂಡಲಿಕ ರವರಿಗೆ ಉಬ್ಜಾ ಎಂಬ ಸಹೋದರಿ ಇರಲಿಲ್ಲ ಎಂದರೆ ಸರಿಯಲ್ಲ. ಉಬ್ಜಾ ಅಲಿಯಾಸ ಶೆಂವ್ಟಿ ಹಾಗೂ ಪುಂಡಲಿಕ ಅಥವಾ ಕೋಯರ್ ರವರ ಕುಟುಂಬಕ್ಕೂ ಯಾವದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಕೋಯರ್ ರವರು ಮೃತಪಟ್ಟಿರುತ್ತಾರೆ. ಅವರು ತೀರಿಕೊಂಡು ಎಷ್ಟು ವರ್ಷಗಳಾಗಿದೆ ಎಂಬುದು ನನಗೆ ಹೇಳಲು ಆಗುವುದಿಲ್ಲ. ಪುಂಡಲಿಕ ಕೂಡಾ ಜೀವಂತ ಇರುವುದಿಲ್ಲ. ಅವರು ತೀರಿಕೊಂಡು ಬಹಳ ವರ್ಷಗಳಾಯಿತು. ಪುಂಡಲಿಕನ ಹೆಂಡತಿಯ ಹೆಸರು ನನಗೆ ನೆನಪಿಲ್ಲ. ಸಾಕ್ಷಿ ಮುಂದುವರಿದು ಅವರ ಹೆಂಡತಿಯ ಹೆಸರು ಕಸ್ತೂರಿ ಎಂದು ನುಡಿಯುತ್ತಾರೆ. ಸದ್ರಿ ಪುಂಡಲಿಕ ರವರ ಹೆಂಡತಿ ಮಕ್ಕಳು ತೀರಿಕೊಂಡಿರುತ್ತಾರೆ. ಶೆಂವ್ಟಿ ರವರಿಗೆ ನಾಲ್ಕು ಗಂಡು ಮಕ್ಕಳು ಹಾಗೂ ಮೂರು ಹೆಣ್ಣು ಮಕ್ಕಳು. ಅವರಿಗೆಲ್ಲಾ ಮದುವೆಯಾಗಿತ್ತು. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ಏನೆಲ್ಲಾ ಬರೆಯಲಾಗಿದೆ ಎಂಬುದು ನನಗೆ ಗೊತ್ತಿದೆ. ಅವರ ಕುಟುಂಬದಲ್ಲಿ ಯಾದವೇ ಧಾರ್ಮಿಕ ಕಾರ್ಯಕ್ರಮಗಳು ಆಗಿರುವುದಾಗಲಿ, ನಾನು ಭಾಗವಹಿಸಿರುವುದಾಗಲಿ ಇರುವುದಿಲ್ಲ ಎಂದರೆ ಸುಳ್ಳು. ವಾದಿಯರಿಗೆ ಸಹಾಯ ಮಾಡಬೇಕು ಎಂಬ ಉದ್ದೇಶದಿಂದ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ

Sd/-

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು

ಕಾರವಾರ.

ಮೂಲ ದಾವಾ ನಂಃ 12/2020

ಪಿ.ಡಬ್ಲ್ಯೂಃ 04

( ಇಂದು ದಿನಾಂಕಃ 22.08.2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಾದ ಶ್ರೀ ಆರ್. ಎಸ್. ಎಚ್. ಜಿ. ರವರಿಂದ**

ನನ್ನ ಊರು ತೋರ್ಲೆಬಾಗ್. ವಾದಿಯರು ಈ ದಾವೆಯನ್ನು ಪ್ರತಿವಾದಿ ದಾವಾ ಜಮೀನುಗಳು ತಮ್ಮದೇ ಎಂದು ಹೇಳಿಕೊಂಡಿದ್ದು ಅದು ಸುಳ್ಳು ಎಂದು ಸದ್ರಿ ದಾವೆ ತಂದಿರುತ್ತಾರೆ. ವಿಜಯನ ತಂದೆಯ ಹೆಸರು ಸೈರೋಬಾ. ಸೈರೋಬಾನ ತಂದೆಯ ಹೆಸರು ಸುಬ್ಬಾ. ಸುಬ್ಬಾ ಮತ್ತು ಕೋಯರ್ ಅಣ್ಣತಮ್ಮಂದಿರು ಎಂದರೆ ಸುಳ್ಳು. ದೇವಕಿ ಮನೆಯ ಮತ್ತೊಂದು ಭಾಗದಲ್ಲಿ ಸುಬ್ಬಾ ರವರು ಇರುತ್ತಿದ್ದರು ಎಂದರೆ ಸರಿಯಲ್ಲ. ತೋರ್ಲೆಬಾಗದಿಂದ ದಾವಾ ಜಮೀನು 1 ಕಿ ಮೀ ದೂರದಲ್ಲಿದೆ. ನಾನು ವಾದಿ ಮತ್ತು ಪ್ರತಿವಾದಿಯರ ಪರಿಚಯಸ್ಥ, ಆದರೆ ಸಂಬಂಧಿಕನಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ಶೆಂವ್ತಿ ಅಲಿಯಾಸ್ ದೇವಕಿ ರವರು ಕೋಯರ್ ನ ಮಗಳು ಮತ್ತು ಪುಂಡಲಿಕನ ಸಹೋದರಿ ಅಂತಾ ಹೇಳಿ ಸುಳ್ಳು ಬರೆಯಿಸಿದ್ದೇನೆ ಎಂದರೆ ಸರಿಯಲ್ಲ. ನನಗೆ ಪುಂಡಲಿಕ ರವರ ಕುಟುಂಬದ ಬಗ್ಗೆ ಏನೂ ಗೊತ್ತಿಲ್ಲ ಎಂದರೆ ಸರಿಯಲ್ಲ. ಪುಂಡಲಿಕನಿಗೆ ಯಾವದೇ ಸಹೋದರ ಸಹೋದರಿಯರು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಯಾವತ್ತೂ ಸಹಾ ಪುಂಡಲಿಕನ ಮನೆಗೆ ಹೋಗಿರುವುದಾಗಲಿ, ಕಾರ್ಯಕ್ರಮಗಳಲ್ಲಿ ಭಾಗವಹಿಸಿರುವುದಾಗಲಿ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಪುಂಡಲಿಕನ ಮನೆಗೆ ಹೋದಾಗ ದೇವಕಿ ಸಹಾ ಅಲ್ಲಿ ಇರುತ್ತಿದ್ದರು ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ದಾವೆಯ ಯಾವದೇ ವಿಷಯದ ಬಗ್ಗೆ ಮಾಹಿತಿ ಇಲ್ಲದೇ ಇದ್ದರೂ ಸಹಾ ವಾದಿಯ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ

Sd/-

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು

ಕಾರವಾರ.